ಓ ಎಸ್ ನಂಃ176/17
ಡಿ.ಡಬ್ಲ್ಯೂ - 01
ದಿನಾಂಕಃ 30.06.2026.

ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಬಿ ವಕೀಲರಿಂದಃ

ದಾವೆಯಲ್ಲಿ ಸಲ್ಲಿಸಲಾದ ತಕರಾರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವೆಯಲ್ಲಿ ಸಲ್ಲಿಸಲಾದ ಪ್ರಮಾಣಪತ್ರಕ್ಕೆ ನನ್ನ ಅಣ್ಣ ಮಾಹಿತಿ ನೀಡಿರುತ್ತಾರೆ. ವಾದಿಯು ಯಾವ ಕಾರಣಕ್ಕೆ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ವಾದಿಯೇ ಮಾಲೀಕ ಆಗಿದ್ದು, ಸ್ವಾಧೀನದಲ್ಲಿದ್ದಾನೆ ಎಂದರೆ ಸರಿಯಲ್ಲ. ದೊಡ್ಡಕ್ಕ ನನಗೆ ಅಜ್ಜಿ ಆಗಬೇಕು. ದೊಡ್ಡಕ್ಕನ ಗಂಡನ ಹೆಸರು ಮುದ್ದೀರಪ್ಪ ಎಂದರೆ ಸಾಕ್ಷಿಯು ಈರಪ್ಪ ಎಂದು ನುಡಿದಿರುತ್ತಾರೆ. ನನ್ನ ತಂದೆಯ ಹೆಸರು ಈರಪ್ಪ ಎಂದರೆ ಸರಿಯಲ್ಲ. ಮುದ್ದೀರಪ್ಪ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ನನ್ನ ತಂದೆಯ ಹೆಸರು ಮುದ್ದೀರಪ್ಪ ಎಂದು ತೋರಿಸಲು ನಾನು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದೊಡ್ಡಕ್ಕನಿಗೆ ಈರಪ್ಪ ಮತ್ತು ಕುಂಟಪ್ಪ ಎಂಬ ಮಕ್ಕಳು ಎಂದರೆ ಸರಿ. ಅದರಲ್ಲಿ ಮೊದಲನೇಯವರು ನನ್ನ ತಂದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಹೆಸರು ಮುದ್ದೀರಪ್ಪ ಎಂದು ನುಡಿದಿರುತ್ತಾರೆ.

ಸರ್ವೇ ನಂ. 42/ಎ ನಲ್ಲಿ 7 ಎಕರೆ 7 ಗುಂಟೆ ಆದೇ ಸರ್ವೇ ನಂ. 42/ಪಿ ನಲ್ಲಿ 9 ಎಕರೆ 20 ಗುಂಟೆ ಇರುತ್ತದೆ. ಖಾತೆಯು ನನ್ನ ಅಜ್ಜಿಯ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತು ಮೊದಲಿಗೆ ನನ್ನ ಅಜ್ಜಿಯಾದ ದೊಡ್ಡಕ್ಕನಿಗೆ ದರಕಾಸಿನ ಬಂದಿರುತ್ತದೆ. ಅದಕ್ಕೆ ಸಂಬಂದಿಸಿದ ದಾಖಲಾತಿಗಳನ್ನು ನಾನು ಹಾಜರುಪಡಿಸಿರುತ್ತೇನೆ. ಸರ್ವೇ ನಂ. 42 ರಲ್ಲಿ ಪೂರ ಜಮೀನು ಮೊಮ್ಮಕ್ಕಳ ಹೆಸರನ್ನು ತೋರಿಸುತ್ತಿದೆ. ಅದೇ ರೀತಿ ಸರ್ವೇ ನಂ. 42/1 ಎ ನಲ್ಲಿ 7 ಎಕರೆ 7 ಗುಂಟೆ ನಾನೇ ಸ್ವಾಧೀನದಲ್ಲಿ ಇದ್ದೇನೆ. ಅದಕ್ಕೆ ಸಂಬಂದಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಖಾತೆ ಮತ್ತು ಪಹಣಿಗಳು ನಮ್ಮ ಕುಟುಂಬದವರ ಯಾರ ಹೆಸರಿಗೂ ಇಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನನ್ನ ಅಜ್ಜಿಯ ಹೆಸರಿಗೆ ಇರುತ್ತದೆ ಎಂದು ನುಡಿದಿರುತ್ತಾರೆ. ದೊಡ್ಡಕ್ಕನ ಹೆಸರಿನಲ್ಲಿ ಇರುವಂತಹ ಹಳೆಯ ಮತ್ತು ಹೊಸ ಪಹಣಿ ಪತ್ರಿಕೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕುಂಟಪ್ಪ ನನ್ನ ಚಿಕ್ಕಪ್ಪ ಎಂದರೆ ಸರಿ. ಸದರಿ ದಾವೆಯಲ್ಲಿ ಕುಂಟಪ್ಪ ತಕರಾರನ್ನು ಸಲ್ಲಿಸಿರುವುದಿಲ್ಲ ಮತ್ತು

ಹಾಜರಾಗಿರುವುದಿಲ್ಲ ಎಂದರೆ ಸರಿ. ದೊಡ್ಡಕ್ಕ ಮರಣ ಹೊಂದಿ 45 ವರ್ಷ ಅಗಿರಬಹುದು. ದೊಡ್ಡಕ್ಕನ ಮರಣ ನಂತರ ದಾವಾ ಸ್ವತ್ತು ಅವರ ಹೆಸರಿನಲ್ಲಿ ಉಳಿದಿರಲಿಲ್ಲ ಎಂದರೆ ಸರಿಯಲ್ಲ.

ದಿಃ 07.09.1953 ರಲ್ಲಿ ನನ್ನ ಅಜ್ಜಿ ಗುತ್ಯಮ್ಮ ತಂದೆ ನರಸಿಂಹಯ್ಯ ಅವರಿಗೆ ಸರ್ವೇ ನಂ. 42/2 ರಲ್ಲಿ 9 ಎಕರೆ ಪೈಕಿ 2 ಎಕರೆ 12 ಗುಂಟೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಕ್ಕೆ ನನ್ನ ಅಜ್ಜಿ ದೊಡ್ಡಕ್ಕನ ಮಗನಾದ ಕುಂಟಪ್ಪನು ಸಹ ಸಹಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಅಜ್ಜಿ ದೊಡ್ಡಕ್ಕನವರು ದಿಃ 03.08.1964 ರಲ್ಲಿ ಕೆ.ಜಿ. ರಾಮಯ್ಯನವರಿಗೆ ಸರ್ವೇ ನಂ. 42/2 ರಲ್ಲಿ 7 ಎಕರೆ ಪೈಕಿ 3 ಎಕರೆ 20 ಗುಂಟೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 17.08.1966 ರಲ್ಲಿ ನನ್ನ ತಂದೆ ಈರಪ್ಪ ನವರು ಸರ್ವೇ ನಂ. 42/1 ಎ ನಲ್ಲಿ 1 ಎಕರೆ ಹಾಗೂ ಸರ್ವೇ ನಂ. 42/2 ಎ ನಲ್ಲಿ 2 ಎಕರೆಯನ್ನು ಕೆ ಜಿ ರಾಮಯ್ಯ ನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಹ ಯರಪ್ಪ ತಂದೆ ವೆಂಕಟಪ್ಪನವರ ಕುಟುಂಬಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ದಿಃ 25.02.1953 ರಲ್ಲಿ ಗುತ್ಯಮ್ಮನವರು ವಾದಿಗೆ ಮಾರಾಟ ಮಾಡಿರುವ ಸ್ವತ್ತನ್ನು ಗುತ್ಯಮ್ಮನವರ ತಂದೆ ನರಸಿಂಹಯ್ಯ ಯರ್ರಪ್ಪ ನವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನರಸಿಂಹಯ್ಯನವರ ಮರಣ ನಂತರ ಅವರ ಒಬ್ಬಳೇ ಮಗಳಾದ ಗುತ್ಯಮ್ಮನವರಿಗೆ ದಾವಾ ಸ್ವತ್ತು ಪೌತಿ ಆಧಾರದ ಮೇಲೆ ಬಂದಿರುತ್ತದೆ ಎಂದರೆ ಸರಿಯಲ್ಲ.

ದಿಃ 07.10.1983 ರಂದು ವಾದಿಗೆ ಗುತ್ಯಮ್ಮನವರು ದಾವಾ ಸ್ವತ್ತನ್ನು ಮಾರಾಟ ಮಾಡಿರುತಾನೆ ಎಂದರೆ ಸರಿಯಲ್ಲ. ವಾದಿಗೆ ಮಾರಾಟ ಮಾಡುವ ಪೂರ್ವದಲ್ಲಿ ಗುತ್ಯಮ್ಮನವರೆ ದಾವಾಸ್ವತ್ತಿನ ಮಾಲೀಕರು ಮತ್ತು ಸ್ವಾಧೀನನುಭವರು ಎಂದರೆ ಸರಿಯಲ್ಲ. ಗುತ್ಯಮ್ಮನವರ ಹೆಸರಿನಲ್ಲಿಯೇ ಎಲ್ಲಾ ಕಂದಾಯ ದಾಖಲಾತಿಗಳು ಸಹ ಇತ್ತು ಎಂದರೆ ಸಾಕ್ಷಿಯು ಅವು ನಕಲಿಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಯರ್ರಪ್ಪ ಬಿನ್ ವೆಂಕಟಪ್ಪ ನಮ್ಮ ಗ್ರಾಮದವರು ಎಂದರೆ ಸರಿಯಲ್ಲ. ಅವು ಕಗ್ಗಲುಕಟ್ಟೆಯ ವಾಸಿಯಾಗಿರುತ್ತಾರೆ. ಅವರಿಗೂ ನಮಗೂ ಸಂಬಂಧ ಇಲ್ಲ ಎಂದರೆ ಸರಿ. ದಾವಾ ಸ್ವತ್ತು ಕಗ್ಗಲ ಕಟ್ಟೆಗೆ ಸೇರಿದ್ದಾಗಿರುತ್ತದೆ. ಕಗ್ಗಲಕಟ್ಟೆಗೂ ಕಂಚೀಪುರಕ್ಕೂ 3 ಕಿಲೋ ಮೀಟರ್ ಅಂತರವಿದೆ. ವಾದಿಯದ್ದು ಕಂಚೀಪುರ ಎಂದರೆ ಸರಿ. ನಾನು ವಾಸವಾಗಿರುವ ಊರು ಮುದಿಯಪ್ಪನಹಟ್ಟಿ. ಮುದಿಯಪ್ಪನಹಟ್ಟಿಯಿಂದ ದಾವಾ ಸ್ವತ್ತಿಗೂ 4 ಕಿ ಮೀ ಆಗುತ್ತದೆ.

ನಮ್ಮದು ದೊಡ್ಡ ಕುಟುಂಬ ಎಂದರೆ ಸರಿ. ನಾವು ಅಣ್ಣ ತಮ್ಮಂದಿರು 25 ರಿಂದ 30 ಜನ ಇದ್ದೇವೆ. ಅಕ್ಕಪಕ್ಕದ ಜಮೀನಿನವರಿಗೆ ತೊಂದರೆ ನೀಡುವುದು ನಮ್ಮ ಸ್ವಭಾವ ಎಂದರೆ ಸರಿಯಲ್ಲ. ವಾದಿಯು ನಮ್ಮ ವಿರುದ್ದ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಆಗ ಪೋಲೀಸ್ ನವರು ನನಗೆ ದಾವಾ ಸ್ವತ್ತಿನ ಬಳಿ ಹೋಗಬಾರದು ಎಂದು ತಾಕಿತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ, ನನ್ನ ಕುಟುಂಬಕ್ಕೆ ಸೇರಿದ ಯಾವುದೇ ಆಸ್ತಿಯು ದಾವಾ ಸರ್ವೇ ನಂಬರ್ ನಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಯು ಏಕಾಂಗಿಯಾಗಿರುವ ಕಾರಣ ಅವರಿಗೆ ತೊಂದರೆ ನೀಡಲು ಸುಳ್ಳು ತಕರಾರನ್ನು ಸಲ್ಲಿಸಿ ಸುಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಗಿದೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.